ಮೊಳಗುತ್ತಿದ್ದವು. ಕಸ್ತೂರ್‌ಬಾ 'ಮಹದೇವ, ಘೋಷಣೆ ನಿಲ್ಸು' ಎಂದರು.

ಮಹದೇವ ಸುಮ್ಮನಾದಾಗ ಏನೆಂದು ತಿಳಿಯದೆ ಜನರು ಅರೆಬರೆ ಘೋಷಣೆ ಕೂಗುತ್ತ ಆಮೇಲೆ ಮೌನವಾದರು. ಈಗ ಕಸ್ತೂರ್‌ಬಾ ಜನರನ್ನು ಉದ್ದೇಶಿಸಿ ಮಾತಾಡಿದರು:

'ನೋಡಿ ಈ ಸೀರೆನೆಲ್ಲ ನಾನ್ ವಿದೇಶಕ್ಕೆ ಹೊರಟಾಗ, ವಿದೇಶದಲ್ಲಿದ್ದಾಗ, ಬಾಪು ಪ್ರೀತಿಯಿಂದ ಕೊಡ್ಸಿದ್ದು. ಇವತ್ತು ಬಾಪು ಕರೆ ಕೊಟ್ಟ ಪ್ರಕಾರ ಈ ಸೀರೇನೆಲ್ಲ ಸುಟ್ ಹಾಕ್ತೀನಿ. ನಾನೂ ಚಳವಳೀಲ್ ಭಾಗವಹಿಸ್ತೀನಿ' ಎಂದವರೇ ಒಂದು ಕಡೆ ಗುಡ್ಡೆ ಹಾಕಿದರು. ದೇವದಾಸ್ ಆ ಸೀರೆಗುಡ್ಡೆ ಮೇಲೆ ಸೀಮೆಎಣ್ಣೆ ಸುರಿದ. ಕಸ್ತೂರ್‌ಬಾ ಬೆಂಕಿ ಕಡ್ಡಿ ತೀಡಿ ಸೀರೆ ಮೇಲೆ ಎಸೆದರು.

ಧಗ್ಗೆಂದಿತು ಸೀರೆಯ ಬೆಂಕಿ
ಕಣ್ಣೆದುರು ಸುಟ್ಟದ್ದು ಸೀರೆ
ಮೊಳಗಿತು ಕರೆ,
ಹರಿಯಿತು ಪೊರೆ,
ಹೊಸ ಭಾವದ ನೊರೆ.

* * *

'ನೋಡಿದ್ಯ, ನಿನ್ನ ಶಕ್ತಿ ಏನು ಅಂತ! ನೀನು ಸ್ವದೇಶಿ ಸಂಕೇತ ಆಗ್ಬಿಟ್ಟೆ.'

ನೆನಪಿನಂಗಳದ ಬೆಳಕಲ್ಲಿದ್ದ ಕಸ್ತೂರ್‌ಬಾ ಮತ್ತೆ ಕತ್ತಲ ವಾಸ್ತವಕ್ಕೆ ಬಂದರು. ಗಾಂಧಿಯ ಕಡೆ ನೋಡಿದರು. ಗಾಂಧಿ ಮುಖದಲ್ಲಿ ಹೆಮ್ಮೆಯಿತ್ತು. ಈ ಹೆಮ್ಮೆ ಕತ್ತಲ ಕಂಗಳಲ್ಲಿ ಕಂಗೊಳಿಸಿತ್ತು.

'ಅಷ್ಟರೊಳಗೆ ನಿಮ್ ಜೊತೆ ಚಳವಳೀಲಿ ಭಾಗವಹಿಸಿದ್ದೆ ಅಲ್ವ? ನೀವ್ ಬೇರೆ ನನ್ನ ಜೀವನವೇ ನನ್ನ ಸಂದೇಶ, ಅಂತಿದ್ರಿ. ನಾನೂ ಅದಕ್ ತಕ್ಕನಾಗ್ ಇರ್ಬೇಕಲ್ವ?'

'ನನ್ನ ಸಂದೇಶಾನೇ ಮುಖ್ಯ ಆಗಿಲ್ಲಿಲ್ಲ. ನೀನು ಸ್ವಂತಂತ್ರವಾಗ್ ಯೋಚ್ನೆ ಮಾಡೊ ವ್ಯಕ್ತಿ ಅಂತ ನಮ್ಮಲ್ಲೇ ಅನೇಕರು ಹೇಳಿದ್ದಾರೆ.'

'ಅವ್ರ್ ಏನೋ ಹೇಳಿದ್ದಾರೆ ಸರಿ; ಆದ್ರೆ ನೀವ್ ಬಿಡ್ ಬೇಕಲ್ಲ ನನ್ನ?'

'ನಾನೇನ್ ಮಾಡ್ದೆ ಕಸ್ತೂರ್? ನಿನ್ನ ಎಲ್ಲಿ ತಡೆದಿದ್ದೀನಿ?'

'ದಕ್ಷಿಣ ಆಫ್ರಿಕಾದಲ್ಲಿ ಹಿಂಜರಿದಿದ್ರಿ. ಇಲ್ಲಿ ನೀವೇನೂ ತಡೀಲಿಲ್ಲ. ತೊಡಗಿಸ್ ಕೊಂಡ್ರಿ. ಆದ್ರೆ ಸ್ವಾತಂತ್ರ್ಯ ಸ್ವಾತಂತ್ರ್ಯ ಅಂತ ನಿತ್ಯ ಹೇಳೋ ನೀವು ಆಗಾಗ್ಗೆ ನನ್ ಸ್ವಾತಂತ್ರ್ಯಕ್ಕೆ ಅಡ್ಡಿ ಬಂದ್ರಿ!'

'ಇದೆಂಥ ಆರೋಪ ಕಸ್ತೂರ್?'

ಗಾಂಧಿಗೆ ನೋವು, ಬೇಸರ ಒಟ್ಟಿಗೇ ಆಯಿತು.

ಅದೇ ದನಿಯಲ್ಲಿ ಕೇಳಿದರು. ಕಸ್ತೂರ್‌ಬಾಗೆ ಏನನ್ನೂ ಮುಚ್ಚಿಟ್ಟುಕೊಳ್ಳುವ ಮನಸ್ಸಿರಲಿಲ್ಲ. ಅನಿಸಿದ್ದೆಲ್ಲ ಹೇಳಲೇಬೇಕೆಂಬ ಹಟದಲ್ಲಿದ್ದಂತೆ ಕಾಣಿಸಿತು.

'ಆರೋಪ ನಾನ್ ಮಾಡ್ತಿಲ್ಲ ಬಾಪು. ಆಶ್ರಮದಲ್ಲಿ ಸಣ್ಣ ಸಣ್ಣ ವಿಷ್ಯದಲ್ಲೂ ಆರೋಪ ಮಾಡ್ತಿದ್ದೋರು ನೀವು. ನಾನು ಹೆಸ್ರಿಗ್ ಯಜಮಾನಿ ಆಶ್ರಮಕ್ಕೆ. ಆದ್ರೆ ನೀವ್ ಯಜಮಾನ್ರು, ಸುಮ್ನೆ ಬಿಟ್ಟಿದ್ರ. ಎಲ್ಲಾದ್ರೂ ತಲೆ ಹಾಕ್ತಿದ್ರಿ.'

ಗಾಂಧಿಗೆ ಗೊತ್ತಾಯಿತು. ಕಸ್ತೂರ್ ಬಾ ಹಳೆಯದನ್ನೆಲ್ಲ ಅಗೆದು ತಂದು ತಮ್ಮ ಮುಂದೆ ಹರಡುತ್ತಾರೆ ಎಂದು. ಪ್ರತಿಕ್ರಿಯಿಸದೆ ಸುಮ್ಮನೆ ಕೂತರು.

'ಯಾಕ್ ಸುಮ್ನೆ ಕೂತ್ರಿ?'

ಕಸ್ತೂರ್‌ಬಾ ಕೇಳಿದರು.

ಗಾಂಧಿ ಮಾತಾಡಲಿಲ್ಲ.

'ಜಾಣ ಮೌನ!'

ಕಸ್ತೂರ್ ಕೆಣಕಿದರು. ಗಾಂಧಿ, ಮೌನ ಮುರಿಯಲೇ ಬೇಕಾಯಿತು.

'ಹಾಗೆಲ್ಲ ಮಾತಾಡ್‌ಬೇಡ, ಆಶ್ರಮದಲ್ಲಿ ನಾನ್ ಏನ್ ತೊಂದ್ರೆ ಕೊಟ್ಟೆ. ಹೇಳು.'

'ತೊಂದ್ರೆ ಅನ್ನೋದ, ಅಡ್ಡಿ ಅನ್ನೋದ, ಆರೋಪ ಅನ್ನೋದ, ಅಥವಾ ಎಲ್ಲಾ ಸೇರಿದ್ದು ಅನ್ನೋದ, ನಾನು ವ್ಯಾಖ್ಯಾನ ಮಾಡೊಲ್ಲ. ಆದ್ರೆ ಆಶ್ರಮದ ಒಬ್ಬರು ಕಾಯಿಲೆ ಬಿದ್ದಾಗ, ಆಸೆ ಆಯ್ತು ಅಂತ ನಾನು ಸಿಹಿ ತಿಂಡಿ ಮಾಡಿಕೊಂಡಾಗ, ಕಾಫಿ ಕುಡ್ದಾಗ, ಏನೆಲ್ಲ ಆಯ್ತು ಅಂತ ನಿಮಗೆ ನೆನಪಿದ್ಯ?' ಎಂದು ನಿದರ್ಶನ ಸಮೇತ ನೆನಪಿಸಲು ಪ್ರಯತ್ನಿಸಿದರು ಕಸ್ತೂರ್‌ಬಾ.

ಆದರೆ ಗಾಂಧಿ ಮಾತಾಡಲಿಲ್ಲ.

'ನಿಮಗೆ ನೆನಪಿದ್ಯೊ ಇಲ್ವೊ; ಆದ್ರೆ ಅನುಭವಿಸಿದ ನನಗೆ ನೆನಪಿದೆ' ಎಂದರು ಕಸ್ತೂರ್‌ಬಾ. ಗಾಂಧಿ ಅದಕ್ಕೂ ಮರು ಮಾತಾಡಲಿಲ್ಲ. ಕಸ್ತೂರ್‌ಬಾಗೆ ನೆನಪು ಕಾಡದೆ ಬಿಡಲಿಲ್ಲ.

* * *

ಆಶ್ರಮವಾಸಿಗಳೆಲ್ಲ ಚರಕದಲ್ಲಿ ನೂಲುತ್ತ ಕೂತಿದ್ದರು. ಒಬ್ಬಾತ ಮಾತ್ರ ಕಷ್ಟ ಪಡುತ್ತಿರುವುದು ಗಾಂಧಿಗೆ ಕಾಣಿಸಿತು. ಗಾಂಧಿ ಎದ್ದು ಹತ್ತಿರ ಬಂದು ಕೇಳಿದರು.

'ಯಾಕೆ, ಏನೋ ಕಷ್ಟ ಪಡ್ತಿರೊ ಹಾಗಿದೆ. ಆರೋಗ್ಯ ಸರಿಯಿಲ್ವ?' ಎಂದು ಹಣೆ ಮೇಲೆ ಕೈಯಿಟ್ಟರು. ಸುಡುತ್ತಿತ್ತು. ಜ್ವರ ಬಂದಿತ್ತು.

'ಜ್ವರ ಬಂದಿದೆ. ಯಾರೂ ಔಷಧಿ ಕೊಡ್ಲಿಲ್ವ?'

ಆತ ಏನೂ ಹೇಳಲಿಲ್ಲ. ತಲೆತಗ್ಗಿಸಿದ.

'ಕಸ್ತೂರ್‌ಬಾ ವಿಚಾರಿಸ್ಕೊಳ್ಳಲಿಲ್ವ?'

ಅದಕ್ಕೂ ಆತ ಉತ್ತರಿಸಲಿಲ್ಲ.

ಆದರೆ ಗಾಂಧಿಗೆ ಅರ್ಥವಾಯಿತು.

'ಕಸ್ತೂರ್' ಎಂದು ಗಟ್ಟಿಯಾಗಿ ಕೂಗಿದರು.

ಆನಂತರ ಮತ್ತೆ ಆತನನ್ನ ಕೇಳಿದರು:

'ಎಷ್ಟು ದಿನ ಆಯ್ತು?'

'ಎರಡು ದಿನ' ಅಂದ ಆತ ಕ್ಷೀಣ ಸ್ವರದಲ್ಲಿ.

ಅಷ್ಟರಲ್ಲಿ ಗಾಂಧಿಯವರ ಏರುದನಿಗೆ ಚರಕ ಗಳೆಲ್ಲ ಸ್ತಬ್ಧವಾಗಿದ್ದವು. ಅಲ್ಲಿದ್ದವರೆಲ್ಲ ಗಾಂಧಿ ಕಡೆ ನೋಡಿದರು. ಗಾಂಧಿ ಮತ್ತೆ 'ಕಸ್ತೂರ್' ಎಂದು ಕೂಗಿದಾಗ, ಮಹದೇವ ದೇಸಾಯಿ ಕರೆದುಕೊಂಡು ಬರುತ್ತಿದ್ದ. ಕಸ್ತೂರ್‌ಬಾ ಬಂದವರೇ 'ಯಾಕ್ ಹಾಗ್ ಕೂಗ್ತಿದ್ದೀರ?' ಎಂದು ಬೇಸರದಿಂದಲೇ ಕೇಳಿದರು.

'ಕೂಗದೆ ಇನ್ನೇನ್ ಮಾಡಬೇಕಿತ್ತು. ಆಶ್ರಮದಲ್ಲಿ ಆರೋಗ್ಯ ವಿಚಾರ್ಸೋರ್ ಯಾರೂ ಗತಿ ಇಲ್ವ?' – ಗಾಂಧಿ ಪ್ರಶ್ನಿಸಿದರು.

'ಯಾಕೆ? ಯಾರಿಗೇನಾಯ್ತು?' ಕಸ್ತೂರ್‌ಬಾ ಗಾಬರಿಯಿಂದ ಕೇಳಿದರು.

'ನೋಡು, ಈತನಿಗೆ ಜ್ವರ ಬಂದಿದೆ. ಎರಡು ದಿನದಿಂದ ನೀವ್ಯಾರೂ ನೋಡ್ಕಂಡಿಲ್ಲ.'

'ನನಗೆ ಯಾರೂ ಹೇಳಲಿಲ್ಲ.'

'ಹೇಳಲಿ, ಹೇಳದೆ ಇರ್ಲಿ. ಎಲ್ರನ್ನೂ ಒಂದ್ ಸಾರಿ ಭೇಟಿ ಮಾಡಿ ಕುಂದುಕೊರತೆ ವಿಚಾರ್ಸೋದು ನಿನ್ನ ಕರ್ತವ್ಯ.'

ಕಸ್ತೂರ್‌ಬಾಗೆ ಎಲ್ಲರೆದರೂ ಅವಮಾನವಾದ ಅನುಭವ. ಆದರೂ ತೋರಗೊಡದೆ ಜ್ವರ ಬಂದಾತನ ಬಳಿಗೆ ಬಂದು ತಾವೇ ಕೈಹಿಡಿದು 'ಬಾಪ್ಪ' ಎಂದು ಏಳಿಸಿ ಕರೆದೊಯ್ದರು. ಮಗನ ಲಾಲ್ ಊರಿಗೆ ಹೋಗಿದ್ದರಿಂದ ದೇವದಾಸನನ್ನು ಜೊತೆಗೆ ಕರೆದುಕೊಂಡರು. ಒಂದು ರೂಮಿನಲ್ಲಿ ಮಲಗಲು ಹೇಳಿ ತನಗೆ ಗೊತ್ತಿದ್ದ ದೇಸಿ ಔಷಧಿ ನೀಡಿ ಉಪಚರಿಸಿದರು.

ಹೀಗೆ ಆಗಾಗ್ಗೆ ಮಾತು ಮತ್ತು ಮೌನದ ಸಮರ ನಡೆಯುತ್ತಲೇ ಇತ್ತು. ಒಂದು ದಿನ ಕಸ್ತೂರ್‌ಬಾಗೆ ಸಿಹಿ ತಿನ್ನುವ ಆಸೆಯಾಯಿತು. ತಾವೊಬ್ಬರೇ ಕೂತು 'ಪೊರನ್‌ಪೋಳಿ'ಯನ್ನು ಮಾಡತೊಡಗಿದರು. ತಾವೊಬ್ಬರೇ ತಿನ್ನುವಂತಿಲ್ಲ. ಆಶ್ರಮವಾಸಿಗಳಿಗೆಲ್ಲ ಮಾಡಿ ಬಡಿಸದಿದ್ದರೆ ಸರಿಯಾಗದು. ಹೀಗಾಗಿ ಅದರ ಹೊಣೆಯನ್ನೂ ತಾವೇ ಹೊತ್ತರು.

'ಪೊರನ್‌ಪೋಳಿ' ಸಿಹಿ ತಿಂಡಿ ಮಾಡುತ್ತಿರುವಾಗ ಯಾವತ್ತಿನಂತೆ ಅಡುಗೆಮನೆಗೆ ಮಹದೇವ ದೇಸಾಯಿಯ ಪತ್ನಿ ದುರ್ಗಾಬೆನ್ ಬಂದರು. ಜೊತೆಗೆ ಮಹದೇವ ದೇಸಾಯಿಯೂ ಇದ್ದರು. ಇಬ್ಬರೂ ಕಸ್ತೂರ್‌ಬಾ ಒಬ್ಬರೇ ಸಿಹಿ ತಿಂಡಿ ಮಾಡುತ್ತಿರುವುದನ್ನು ನೋಡಿ ಅಚ್ಚರಿಯ ಜೊತೆಗೆ ಬೇಸರಪಟ್ಟುಕೊಂಡರು. ದುರ್ಗಾ 'ಇದೇನು, ನೀವೊಬ್ರೇ ಮಾಡೋದ? ನನ್ನೂ ಕರೆದಿದ್ರಾಗ್ತಿರ್ಲಿಲ್ವ? ಮೊದ್ಲೇ ನಿಮಗೆ ಆರೋಗ್ಯದಲ್ಲಿ ಏರುಪೇರು ಆಗ್ತಾ ಇರುತ್ತೆ' ಎಂದು ಹೇಳಿ ಸಹಾಯಕ್ಕೆ ಕೂತರು. ಆಗ ಕಸ್ತೂರ್‌ಬಾ 'ಹಾಗಲ್ಲ ದುರ್ಗಾ, ಯಾಕೋ ಇವತ್ತು ಸಿಹಿ ತಿನ್ನಬೇಕು ಅಂತ ಆಸೆ ಆಯ್ತು. ತಕ್ಷಣ ನಾನೇ ಅಡುಗೆಮನೇಗೆ ಬಂದೆ' ಎಂದು ಸಮಜಾಯಿಷಿ ನೀಡಿದರು. ಆನಂತರ ಮಹದೇವ ದೇಸಾಯಿ ಕಡೆ ತಿರುಗಿ, 'ಒಂದ್ ಕೆಲ್ಸ್ ಮಾಡ್ತೀರ? ಬಾಪೂಗೂ ಸಿಹಿ ತಿಂಡಿ ಕೊಟ್‌ಬರ್ತೀರಾ?' ಎಂದು ಕೇಳಿದರು.

ಮಹದೇವ ದೇಸಾಯಿ ಆಗಲಿ ಎಂದರೂ ಸ್ವಲ್ಪ ಹಿಂಜರಿದರು. ಬಾಪು ಸಡನ್ನಂತ ಏನಾದ್ರು ಅಂದ್‌ಬಿಟ್ರೆ ಅಂತ. ಅದಕ್ಕೆ 'ದುರ್ಗಾನೂ ಬರ್ಲಿ ನನ್ ಜೊತೆಗೆ' ಎಂದರು. ದುರ್ಗಾ ಒಂದು ತಟ್ಟೆ ಯಲ್ಲಿ ಸಿಹಿ ತಿಂಡಿ ಹಾಕಿಕೊಂಡು ಗಂಡನ ಜೊತೆ ಹೊರಟಳು. ಇಬ್ಬರೂ ಗಾಂಧಿಯಿದ್ದಲ್ಲಿಗೆ ಬಂದರು. ಸ್ವಲ್ಪ ಹಿಂಜರಿಕೆಯಿಂದಲೇ ದುರ್ಗಾ ತಟ್ಟೆಯನ್ನು ಗಾಂಧಿ ಮುಂದೆ ಇಟ್ಟಳು.

'ಏನಿದು?'– ಗಾಂಧಿ ಕೇಳಿದರು– ದಿಟ್ಟಿಸಿ ನೋಡುತ್ತ.

'ಸಿಹಿ ತಿಂಡಿ; ಕಸ್ತೂರ್‌ಬಾಗೆ ಪೊರನ್ ಪೋಳಿ ತಿನ್‌ಬೇಕು ಅಂತ ಆಸೆ ಆಯ್ತಂತೆ. ಅದಕ್ ಮಾಡ್ತಾ ಇದ್ರು. ನಿಮ್ಗೂ ಕೊಟ್ ಬರೋಕ್ ಹೇಳಿದ್ರು' ಎಂದು ದುರ್ಗಾ ವಿವರಣೆ ನೀಡಿದ ಕೂಡಲೇ ಗಾಂಧಿ ಕಡ್ಡಿ ತುಂಡಾದಂತೆ ಹೇಳಿದರು: